## ಮಾತು-ಕತೆ



### ವಿವೇಕ ಶಾನಭಾಗ

ಉತ್ತರ ಕನ್ನಡ ಜಿಲ್ಲೆಯ ಕುಮಟೆ ತಾಲ್ಲೂಕಿನ ವಿವೇಕ ಶಾನಭಾಗ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 'ಅಂಕುರ', 'ಲಂಗರು', 'ಹುಲಿ ಸವಾರಿ', 'ಮತ್ತೊಬ್ಬನ ಸಂಸಾರ', 'ಘಾಚರ್ ಘೋಚರ್' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. 'ಸಕ್ಕರೆ ಬೊಂಬೆ', 'ಬಹುಮುಖಿ' ಎಂಬ ನಾಟಕಗಳನ್ನು, 'ಇನ್ನೂ ಒಂದು', 'ಒಂದು ಬದಿ ಕಡಲು', 'ಊರು ಭಂಗ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ.

- **ನೀವು ಕತೆಗಳಿಗಾಗಿ ಯಾವ ರೀತಿಯ ತಯಾರಿ ಮಡಿಕೊಳ್ಳುತ್ತೀರ? ಕತೆ ಬರೆದ ನಂತರದ ಎಡಿಟಿಂಗ್ ಹೇಗಿರುತ್ತೆ?**

ತಯಾರಿ ಅನ್ನುವುದನ್ನು ಹೀಗೇ ಎಂದು ಗುರುತಿಸುವುದು ಕಷ್ಟ. ಕೆಲವೊಮ್ಮೆ ಕತೆ ಹೊಳೆದೊಡನೆ ಬರೆದರೆ ಒಮ್ಮೊಮ್ಮೆ ವರ್ಷಗಳು ಬೇಕಾಗುತ್ತವೆ. ಸಾಮಾನ್ಯವಾಗಿ ಎಲ್ಲರಿಗೂ ಆಗುವಂತೆ ವಸ್ತುವೊಂದು ಒಳಗೇ ಕಾಯುವುದು, ಮಾಗುವುದು ಎಲ್ಲವೂ ಇರುತ್ತೆ. ಬರವಣಿಗೆಯಲ್ಲಿ ಯಾವುದೋ ಒಂದು ಆಳವಾದ, ಅಸ್ಪಷ್ಟವಾದ ಸಂಗತಿಯನ್ನು ಮುಟ್ಟುವುದಕ್ಕೆ ಪ್ರಯತ್ನಿಸುತ್ತಿರುತ್ತೇನೆ. ಅದು ಏನೆಂದು ಬರೆದಾದ ಮೇಲೆಯೇ ಗೊತ್ತಾಗೋದು. ಅದು ಯಾವುದೋ ರೂಪದಲ್ಲಿ ನಮ್ಮನ್ನೂ ಮೀರಿ ಹೊರಬಂದಾಗ ಒಂದು ವಿಸ್ಮಯವನ್ನುಂಟು ಮಾಡುತ್ತದೆ. ಬೇಂದ್ರೆಯವರು ಹೇಳಿದ ಲೀಲೆ ಎಂಬ ಮಾತು ಇದಕ್ಕೇ ಸಂಬಂಧಿಸಿದ್ದು. ಬಹಳ ವಿಶೇಷವಾದ ಸುಖವಿದು. ಕೆಲವೊಮ್ಮೆ ಕತೆಗೆ ಸಂಬಂಧಪಡದ ಅನವಶ್ಯಕ ಸಂಗತಿಗಳನ್ನು ಬರೆದೆನೆಂದು ಭಾವಿಸಿಕೊಂಡಿರುತ್ತೇನೆ. ಆದರೆ ಎಡಿಟಿಂಗಿಗೆ ಕೂತಾಗ ಅವುಗಳ ನಡುವಿನ ಸಂಬಂಧ ನಿಚ್ಚಳವಾಗುತ್ತ ಹೋಗುತ್ತದೆ. ಎಡಿಟಿಂಗ್ ಅನ್ನೋದು ನನ್ನ ಕತೆಯನ್ನು ನಾನೇ ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆ.